ಸಭೆಯಂ ಮುಂದಿಡಲಾದ ಕಾಗದ ಪತ್ರಗಳು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಸ್ವಾಮಿ, ಮುಖ್ಯ ಮಂತ್ರಿಗಳವರ ಪರವಾಗಿ ನಾನು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

Notification No.HD 22 CNA 83 (i) dated 25th January, 1983.

Grant of exemption for the exhibition of 35 mm. films by the Principal, Karnataka Regional Engineering College, Suratkal, Dakshina Kannada.

As required under Section 22 of the Karnata Cinemas (Regulation) Act, 1964.

ಉಪಾಧ್ಯಕ್ಷರು.—ಕಾಗದ ಪತ್ರಗಳನ್ನು ಇಡಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಸ್ವಾಮಿ, ಅಬಕಾರಿ ಮತ್ತು ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳವರ ಪರವಾಗಿ ನಾನು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

Annual Accounts with Report and balance sheet of the Karnataka Electricity Board for the year 1980–81.

As required under Section 69 (5) of the Electricity (Supply) Act, 1948.

ಉಪಾಧ್ಯಕ್ಷರು.—ಕಾಗದ ಪತ್ರಗಳನ್ನು ಇಡಲಾಗಿದೆ.

ಚುನಾವಣಾ ಪ್ರಸ್ತಾವಗಳು.

ಉಪಾಧ್ಯಕ್ಷರು.—ಈಗ ಚುನಾವಣಾ ಪ್ರಸ್ತಾವಗಳು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂದದೀಯ ವ್ಯವಹಾರ ಮಂತ್ರಿಗಳು).— ಉಪಾಧ್ಯಕ್ಷರೇ, ಮಾನ್ಯ ಮಂಖ್ಯಿ ಮಂತ್ರಿಗಳವರ ಪರವಾಗಿ ನಾನು ಈ ಕೆಳಕಂಡ ಪ್ರಸ್ತಾಪಗಳನ್ನು ಸೂಚಿಸುತ್ತೇನೆ.

ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ ೨೬೫(೧)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಗೆ ಹನ್ನೆರಡು ಜನ ಸದಸ್ಯರನ್ನು ಚುನಾಯಿಸುವುದು.

ಆ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೬೮ (೧)ನೇ ನಿಯಮದ ಅನುಸಾರವಾಗಿ ಈ ಸಭೆ, ಅಂದಾಜುಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸುವುದು.

ಇ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೧ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸುವುದು.

ಈ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೨ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಹಕ್ಕು ಬಾಧ್ಯತಾ ಸಮಿತಿಗೆ ಏಳು ಜನ ಸದಸ್ಯರನ್ನು ಚುನಾಯಿಸುವುದು.

ಊ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೭ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಋ) ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೨ (೧)ನೇ ನಿಯಮದ ಅನುಸಾರವಾಗಿ ಈ ಸಭೆ, ಸರ್ಕಾರೀ ಭರವಸೆಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಋು) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ಕಾರ್ಯ ನಡವಳಿಕೆ ನಿಯಮಗಳ ೨೮೩ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗೀ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು ಚುನಾಯಿಸುವುದು.

ೠ) ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ಕಾರ್ಯ ನಡವಳಿಕೆ ನಿಯಮಗಳ ೨೮೬ ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಅದಿಪಜಾತಿಯವರ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸುವುದು.

ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೮ ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸುವುದು.

ಏ) ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮಗಳ ೩೫೩ (೨)ನೇ ನಿಯಮದ ಅನುಸಾರವಾಗಿ ಈ ಸಭೆ ವಸತಿ ಸೌಕರ್ಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಐ) ೧೯೭೬ ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯ ಶಾಸನದ ೨೧ (೧) (೧೪)ನೇ ಕಲಮಿನ ಮೇರೆಗೆ ಅದಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ೫ ಜನ ಸದಸ್ಯರನ್ನು ಚುನಾಯಿಸುವುದು.

ಒ) ೧೯೭೬ ನೇ ಇಸವಿಯ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯದ ಶಾಸನದ ೨೧ (೧) (೧೪)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆ ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ೫ ಜನ ಸದಸ್ಯರನ್ನು ಚುನಾಯಿಸುವುದು.

ಓ) ೧೯೭೬ ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಶಾಸನದ ೨೧ (೧) (೧೪)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆ ಮಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ೫ ಜನ ಸದಸ್ಯರನ್ನು ಚುನಾಯಿಸುವುದು.

ಔ) ೧೯೭೩ ನೇ ಇಸವಿಯ ಕೃತಿ ವಿಶ್ವವಿದ್ಯಾನಿಲಯ ಶಾಸನದ ೨೫ (೨) (ಅ) (೪) ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆ ಕೃಶೀ ವಿಶ್ವವಿದ್ಯಾನಿಲಯದ ರಿಜೆಂಟ್ ಮಂಡಲಿಗೆ ಮೂರು ಜನ ಸದಸ್ಯರನ್ನು ಚುನಾಯಿಸುವುದು.

ಅಂ) ೧೯೭೫ ನೇ ಇಸವಿಯ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಶಾಸನದ ೩ (೨) (ಅ) (೫) ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆ ರಾಜ್ಯ ಗ್ರಂಥಾಲಯ ಅಧಿಕಾರ ವರ್ಗಕ್ಕೆ ನಾಲ್ಕು ಜನ ಸದಸ್ಯರನ್ನು ಚುನಾಯಿಸುವುದು.

(ಪ್ರಸ್ತಾಪಗಳನ್ನು ಸಭೆಯು ಮುಂದಿಡಲಾಯಿತು)

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ.....

ಅ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ ೨೬೫ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಗೆ ಹನ್ನೆರಡು ಜನ ಸದಸ್ಯರನ್ನು ಚುನಾಯಿಸುವುದು.

ಆ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೮ (೧)ನೇ ನಿಯಮದ ಅನುಸಾರವಾಗಿ ಈ ಸಭೆ, ಅಂದಾಜುಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸುವುದು.

ಇ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೧ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸುವುದು.

ಈ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೨ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಹಕ್ಕು ಬಾಧ್ಯತಾ ಸಮಿತಿಗೆ ಏಳು ಜನ ಸದಸ್ಯರನ್ನು ಚುನಾಯಿಸುವುದು.

ಉ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೭ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಊ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೨ (೧)ನೇ ನಿಯಮದ ಅನುಸಾರವಾಗಿ ಈ ಸಭೆ, ಸರ್ಕಾರೀ ಭರವಸೆಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಋ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ಕಾರ್ಯ ನಡವಳಿಕೆ ನಿಯಮಗಳ ೨೮೩ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗೀ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು ಚುನಾಯಿಸುವುದು.

ಋೂ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ಕಾರ್ಯ ನಡವಳಿಕೆ ನಿಯಮಗಳ ೨೮೬ ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿವಂಜಾತಿಯವರ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸುವುದು.

ಎ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೮ ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸುವುದು.

ಏ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೩೫೫ (೨)ನೇ ನಿಯಮದ ಅನುಸಾರವಾಗಿ ಈ ಸಭೆ, ಪಶು ಸೌಕರ್ಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಐ) ೧೯೭೬ ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯ ಶಾಸನದ ೨೧ (೧) (೧೪)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕೈ ಸಂಕ್ರಮಣೀಯ ಮತದ ಮೂಲಕ ಅನುಪಾತಿ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ೫ ಜನ ಸದಸ್ಯರನ್ನು ಚುನಾಯಿಸುವುದು.

ಒ) ೧೯೭೬ ನೇ ಇಸವಿಯ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯದ ಶಾಸನದ ೨೧ (೧) (೧೪)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕೈ ಸಂಕ್ರಮಣೀಯ ಮತದ

ಮೂಲಕ ಅನುಪಾತಿ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆ ಕರ್ನಾಟಕ ವಿಶ್ವ ವಿದ್ಯಾನಿಲಯದ ಸೆನೆಟ್ಟಿಗೆ ೫ ಜನ ಸದಸ್ಯರನ್ನು ಚುನಾಯಿಸುವುದು.

ಓ) ೧೯೭೬ ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಶಾಸನದ ೨೧ (೧) (೧೪)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆ ಮಂಗಳೂರು ವಿಶ್ವ ವಿದ್ಯಾನಿಲಯದ ಸೆನೆಟ್ಟಿಗೆ ೫ ಜನ ಸದಸ್ಯರನ್ನು ಚುನಾಯಿಸುವುದು.

ಔ) ೧೯೭೩ ನೇ ಇಸವಿಯ ಕೃಶಿ ವಿಶ್ವವಿದ್ಯಾನಿಲಯ ಶಾಸನದ ೨೫ (೨) (ಅ) (೪) ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆ ಕೃಶೀ ವಿಶ್ವ ದ್ಯಾನಿಲಯದ ರಿಟರ್ನಿಂಗ್ ಮಂಡಲಿಗೆ ಮೂರು ಜನ ಸದಸ್ಯರನ್ನು ಚುನಾಯಿಸುವುದು.

ಅಂ) ೧೯೬೫ ನೇ ಇಸವಿಯ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಶಾಸನದ ೩ (೨) (ಅ) (೩)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆ ರಾಜ್ಯ ಗ್ರಂಥಾಲಯ ಅಧಿಕಾರ ವರ್ಗಕ್ಕೆ ನಾಲ್ಕು ಜನ ಸದಸ್ಯರನ್ನು ಚುನಾಯಿಸುವುದು.

ಪ್ರಸ್ತಾಪಗಳು ಅಂಗೀಕರಿಸಲ್ಪಟ್ಟಿತು.

ಮಾನವಿಗಳು

ಲಾಲ್‌ಬಾಗ್ ಆವರಣದಲ್ಲಿ ಒಬ್ಬ ಬಾಲಿಕೆಯ ಮೇಲೆ ಮಾಡಿದ ಅತ್ಯಾಚಾರದ ಬಗ್ಗೆ

ಶ್ರೀ ಎಂ. ವೀರಪ್ಪಮೊಯ್ಲಿ.—ಅಧ್ಯಕ್ಷರೇ ನಾನೊಂದು ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇನೆ. ಲಾಲ್‌ಬಾಗ್‌ನಲ್ಲಿ ಮೊನ್ನೆ ೧೨ನೇ ತಾರೀಖಿನ ದಿವಸ ಹಾಡು ಹಗಲಿನಲ್ಲಿ ನಡೆದಂಥ ಒಂದು ದೌರ್ಜನ್ಯದ ವಿಚಾರವನ್ನು ಇಲ್ಲಿ ನಾನು ಪ್ರಸ್ತಾಪ ಮಾಡಬೇಕಾಗಿದೆ. ಒಬ್ಬಳು ಬಾಲಕಿಯ ಮೇಲೆ ಮಾಡಿದಂಥ ಅತ್ಯಾಚಾರದ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ಇದು ಬಹಳ ಪ್ರಾಮುಖ್ಯವಾದ ವಿಷಯ, ಅದರಲ್ಲೂ ಕೂಡ ಬೆಂಗಳೂರಿನ ಶಹರದಲ್ಲಿ ಎಲ್ಲರೂ ನೋಡುತ್ತಿರುವಾಗಲೇ ಈ ರೀತಿಯಾಗಿ ಅತ್ಯಾಚ್ಯಾರ ನಡೆಯುವುದಾದರೆ ಇವತ್ತು ಕಾನೂನಿನ ವ್ಯವಸ್ಥೆ ಇಲ್ಲಿ ಇಲ್ಲ ಮತ್ತೆ ಮಹಿಳೆಯರ ಮಾನ ಸಂರಕ್ಷಣೆಯ ವ್ಯವಸ್ಥೆ ಸಂಪೂರ್ಣವಾಗಿ ಇಲ್ಲ. ಇದರಿಂದ ನಮ್ಮ ಬೆಂಗಳೂರಿನಲ್ಲಿ ಗಲಿಬಿಲಿ ಉಂಟಾಗಿದೆ ಮಾತ್ರ ಇಡೀ ಕರ್ನಾಟಕ ರಾಜ್ಯದಲ್ಲಿ ಉಂಟಾಗಿದೆ.

೧–೦೦ ಪಿ. ಎಂ.

ಈ ಬಗ್ಗೆ ವಿಶ್ವಾಸ ಹುಟ್ಟಿಸತಕ್ಕ ಕಾನೂನಿನ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡದಿದ್ದರೆ ಈ ರೀತಿ ಮುಂದುವರಿಸಿಕೊಂಡು ಹೋಗಲಿಕ್ಕೆ ಸಾಧ್ಯವಿಲ್ಲ. ದಿನಬೆಳಗಾದರೆ ಇಂಥ ಪ್ರಸಂಗಗಳು ಬರುತ್ತಿವೆ. ಇಂತಹ ಕೃತಿ ಪೋಲೀಸ್ ಠಾಣೆಯ ಒಳಗಡೆ ಆಯಿತು, ಹೊರಗಡೆ ಆಯಿತು; ಹಾಡು ಹಗಲಲ್ಲೇ ಇಂಥ ಧೈರ್ಯವನ್ನು ಕುಕರ್ಮಿಗಳು ಮಾಡುವುದು ಇದ್ದರೆ ಬಹಳ ಕಷ್ಟವಾಗುತ್ತದೆ. ಇದರಲ್ಲಿ ಸರ್ಕಾರದ ವೈಫಲ್ಯತೆ ಇದೆ ಎಂದು ಹೇಳುವುದು ಅಷ್ಟೆ ಅಲ್ಲ ಇಷ್ಟೊಂದು ಧೈರ್ಯ ಹಾಡುಹಗಲಲ್ಲೇ ಕುಕರ್ಮಿಗಳಿಗೆ ಬರುವುದಿದ್ದರೆ ಈ ದೇಶದಲ್ಲಿ ಮಹಿಳೆಯರು ಬಾಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಈ ಬಗ್ಗೆ ಚರ್ಚೆ ಮಾಡಲು ಯಾವ ನಿಯಮಗಳ ಅಡೆತಡೆಗಳನ್ನು ಒಡ್ಡದೆ, ನಾಳೆ-ನಾಡಿದ್ದು ತೆಗೆದು ಕೋಳ್ಳೋಣ ಎನ್ನದೆ ಕೂಡಲೇ ಈ ವಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಿಲುವಳಿ ಸೂಚನೆ ಯೆಂದು ನಾವುಸೂಚನೆ ಕೊಡದ್ದಿದರೂ ಸರ್ಕಾರ ಈ ಬಗ್ಗೆ ಚರ್ಚಿಸಲು ಅವಕಾಶಕೊಡ ಬೇಕಾಗುತ್ತದೆ. ಸರ್ಕಾರ ಕಾನೂನು ನೀತಿ ವ್ಯವಸ್ಥೆಯ ಬಗ್ಗೆ ಸರಿಯಾದ ಮಾಹಿತಿ ಕೊಡಬೇಕಾಗುತ್ತದೆ. ಇವತ್ತಿನ ದಿವಸ ನಡೆಯಬಾರದ ಘಟನೆ ನಡೆದು ಹೋಗಿದೆ. ಇದು ಯಾರಿಗೂ ಸಂತೋಷ ತರತಕ್ಕ ವಿಚಾರವಲ್ಲ. ಇದು ಎಲ್ಲರೂ ತಲೆತಗ್ಗಿಸತಕ್ಕ ವಿಚಾರವಾಗಿದೆ. ಸದನದಲ್ಲಿ ಬೇರೆ ಯಾವುದೇ ಕಾರ್ಯ ಕಲಾಪಗಳು ನಡೆದರು ಯಾರಿಗೂ ಮನಸ್ಸಿಗೆ ನೆಮ್ಮದಿ ಬರುವುದಿಲ್ಲ. ಆದುದರಿಂದ, ಈ ವಿಚಾರವನ್ನು ತಕ್ಷಣ ಚರ್ಚೆಗೆ ತೆಗೆದುಕೊಳ್ಳಲು ಅಧ್ಯಕ್ಷರು ಅನುಮತಿ ನೀಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.